**KARNATAKA VETERINARY, ANIMAL & FISHERIES SCIENCES UNIVERSITY**
**Nandinagar, PB No.6, BIDAR-585401, Karnataka**

**Prof.P.T.RAMESH**
M.V.Sc, P.hD (Med)
**REGISTRAR**

**Phone:** 08482-245241/245360
**Fax:** 08482-245360
**email**:regkvafsu@gmail.com

No.R/BOM-126th BOM/Procd/2026-27 Dt. 13-04-2026

To

All Hon'ble Board
Members of
KVAFSU, Bidar

**Sir/Madam,**

Sub: Proceedings of the 126th Meeting of Board of Management of KVAFSU, Bidar held on 27-03-2026 at Bangalore..reg
Ref: Approval of the Vice Chancellor Dt. 13-04-2026

Please find here with enclosed the proceedings of the 126th Meeting of the Board of Management of KVAFSU, Bidar held on **27th March, 2026** at Conferenc Hall, Veterinary College, Hebbal, Bangalore for your kind perusal.

You are requested to go through the same and send the comments if any, on recording of the proceedings on or before **21-04-2026.** If no comments are received before the stipulated date, it will be considered as confirmed from your side.

Thanking you,

Yours faithfully

REGISTRAR

REGISTRAR
KVAFSU, Nandinagar
Bidar - 585 401

Encl: as above
Office file: 126th BOM

*PS-Eng.Corr26*

**PROCEEDINGS OF THE 126TH BOARD OF MANAGEMENT MEETING HELD ON 27-03-2026, 10.30 AM AT CONFERENCE HALL, VETERINARY COLLEGE, BANGALORE**

**I. MEMBERS PRESENT**

**(A) Ex –Officio Members**

| | | |
|---|---|---|
| 1. | The Hon'ble Vice Chancellor<br>KVAFSU, Bidar | Chairman |
| 2 | The Secretary to Government<br>Animal Husbandry & Fisheries Department<br>GOK, Bangalore (online) | Member |
| 3. | The Principal Secretary to Government<br>Law Department, Bangalore<br>(Attended by Dy Secretary) | Member |
| 4. | Director<br>Dept. of AH & VS, Bangalore<br>(Attended online) | Member |
| 5. | Director,<br>Fisheries Department<br>Bangalore | Member |
| 6. | The Registrar,<br>Member Secretary<br>KVAFSU, Bidar | Member |

**(B) Other Members**

| | | |
|---|---|---|
| 1. | Smt.Latha.D.H<br>Women Social Worker<br>Challekere | Member |
| 2. | Dr.Venkatachala.V.S<br>Rural Educationist<br>Doddaballapur | Member |
| 3. | Dr.H.M.Jayaprakash<br>Scientist<br>Heddur Thirthhalli | Member |
| 4. | Sri.Sangappa Walikar<br>Progressive Livestock Farmer<br>Kavadimatti, Muddebihal | Member |
| 5. | Sri. Baswaraj.P.Bhatmurge<br>Progressive Fisherman<br>Channabasavanagar, Bidar | Member |
| 6. | Dr.Sushantth Rai, Bellippady<br>Livestock Industrialist<br>Mangalore | Member |
| 7. | Dr.R.Anil kumar<br>Director of Clinics<br>TANVAS, Chennai | Member |
| 8. | Dr.Shirish Upadhaya<br>Dean, MAFSU<br>Nagpur (Attended online) | Member |

**Members Absent**

1. The Additional Chief Secretary to Government Finance Department Bangalore — Member
2. Dr.Raghavendra Bhatt DDG (Animal Science) ICAR, New Delhi & Hon'ble Board Member (VC Nominee) — Member

The Registrar & Member Secretary welcomed the Hon'ble Members of the Board of Management to the 126th Meeting of the Board of Management. The Hon'ble Vice Chancellor and Chairman welcomed all the Members of the Board and informed the Registrar & Member Secretary to proceed with the presentation of the agenda for the meeting.

**<u>Item No.1</u> Action Taken on the proceedings of 124th Meeting of Board of Management of KVAFSU, Bidar held on 04-01-2025 at Board Room, KVAFSU, Bidar.**

**Resolution**

The Board of Management perused the action taken on the proceedings of 124th Meeting of Board of Management held on 09-01-2026 at Board room, KVAFSU, Bidar and confirmed the same.

(A:R)

**<u>Item No.1</u> Action Taken on the proceedings of 125th Meeting of Board of Management of KVAFSU, Bidar held on 04-01-2025 at Board Room, KVAFSU, Bidar**

**Resolution**

The Board of Mangement perused the action taken on the proceedings of the 125th Meeting of Board of Mangement of KVAFSU, Bidar held on 26-02-2025 at Board Room, KVAFSU, Bidar and confirmed the same with the following suggestions/comments on some of the following item

(A:R)

## TABLE AGENDA ITEM OF 125TH MEETING OF BOARD OF MANAGEMENT

**<u>Item No. 1</u>: Compliance with Court Order for Enhanced Compensation to Landowners Sri Shivamurthy and Others, Veterinary College, Hassan**

**Resolution**

After detailed discussion and deliberation the Board of Management deferred the item and informed to resubmit the same along with detailed opinion from the legal empanelled Advocate duly reviewing the impact of the said case in the similarly situtated cases of the College.

(A:R)

## MAIN ITEMS OF 126TH MEETING OF BOARD OF MANAGEMENT OF KVAFSU, BIDAR

**Item No.3 Action on the Report of the Disciplinary Committee in respect of Dr.Shivakumar.M, Professor, College of Fisheries, Mangalore**

**Resolution**

The Board of Management after detailed discussion and deliberation perused the 123rd proceedings of the Board of Management dated 19-11-2025 and also perused The 124th proceedings of the Board of Management dated 09-01-2026 pertaining to the report of the Disciplinary Committee in respect of Dr.Shivakumar.M, Professor, College of Fisheries Mangalore.

After detailed discussion and deliberation, the Board resolved to confirm the recommendations of the Disciplinary Committee with regard to the proven lapses attributable to the Delinquent Employee.The Board further perused the report of the Disciplinary Committee pertaining to the transfer of a sum of **Rs. 2,83,840/- (Rupees Two Lakh Eighty-Three Thousand Eight Hundred and Forty only)** from the Matsyamela Account bearing Account No. 101337667 maintained with Canara Bank, Mangalore, to the personal account of Dr. Shivakumar M.The Disciplinary Committee, in its report, has recorded the following opinion:

*"Necessary action be initiated to recover Rs. 2,83,840/- (Rupees Two Lakh Eighty-Three Thousand Eight Hundred and Forty only), if the expenditure/bills were settled for purposes other than those meant for the conduct of Matsyamela, from the amount routed through his personal account, and to address the audit issues, if any, related to the bills."*

The Board also perused the letter issued by the Comptroller, KVAFSU, dated **03-09-2020**, addressed to the Registrar, KVAFSU, Bidar, requesting recovery of **Rs. 2,32,413/-** (Rupees Two Lakh Thirty-Two Thousand Four Hundred and Thirteen only). Against the said recoverable amount, the Delinquent Employee has paid **Rs. 11,791/-** (Rupees Eleven Thousand Seven Hundred and Ninety-One only) by way of Cheque No. 604740 drawn on Canara Bank, signed by him, from his personal Account No. 8520101101884, towards the CARPS project.However, the balance amount of **Rs. 2,20,622/-** (Rupees Two Lakh Twenty Thousand Six Hundred and Twenty-Two only) pertaining to the project on Enhancement of Farmer Income and Welfare has not been remitted or recovered to date.

The Board took note of the fact that the conduct of the Delinquent Employee is in direct contravention of the Government Order No. **FD 5 TAR 2017 dated 30-01-2017**, which lays down financial guidelines for the operation of funds in banks by Government Departments, including Universities and State Autonomous Bodies. Specifically, under **Part-A, Serial No. II(3)** of the said Government Order, it is explicitly stipulated as follows:

*"Drawing of money on self-cheque and transfer of scheme funds to personal accounts of authorities/officers is strictly prohibited."*

After detailed discussion and deliberation, the Board of Management **resolved** as follows:

Disciplinary action shall be initiated against Dr. Shivakumar M., Professor, College of Fisheries, Mangalore, in accordance with the the **Karnataka Civil Services (Classification, Control and Appeal) Rules, 1957** secton 8 (viii)

withholding of two annual increments from the present pay and section 8 (iv) recovery from pay an amount of Rs. *2,83,840/- along with interest.*

**(A:R)**

<u>**ವಿಷಯ ಸೂಚಿ**</u> **04: ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರ ಸಕ್ರಮಾತಿ ಕುರಿತು**

**ನಿರ್ಣಯ**

The Registrar briefed the Board, the details pertaining to the DRE's who have been regularized in the University. Also, he brought to the notice of the Board regarding the letter No. Pa.Sa.Mi 309 Pa.AaSae 2025dated 13-03-2026 received from the Department of Animal Husbandry, Government of Karnataka about the issues of the DRE's who have been regularized in the University. The Board perused the above said letter of the Government in detail pertaining to the issues raised in the letter about DRE's regularized in the University.

It was brought to the information of the Board that the University has strictly complied with the direction of the Government issued vide its letter dated 27-02-2019 and accordingly the resolution of the 83rd meeting of the Board of Management regarding the item, regularizing DRE's has been withdrawn during that point of time itself.Also, an endorsement in this context had been issued to the concerned DRE.s stating that their request cannot be considered for regularization. Further, regarding issue of such of those DRE.s who have been regularized vide University order dated 01-07-2017, it was resolved that the matter shall be examined by the University in detail for further needful.

(A:R)

<u>**ವಿಷಯ ಸೂಚಿ 05**</u> **ಶ್ರೀ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕರು, ಇವರ ಮೇಲಿನ ಹಣಕಾಸಿನ ಅವ್ಯವಹಾರ, ಹಣ ದುರುಪಯೋಗದ ಆರೋಪಗಳು ಸಾಬೀತಾದ ಹಿನ್ನೆಲೆ ಮತ್ತು ವಿವಿಧ ಎಂಟರ್ ಪ್ರೈಸಸ್‌ಗಳಿಂದ ಸಾಮಾಗ್ರಿಗಳನ್ನು ಖರೀದಿ ಮಾಡದೇ ಬಿಲ್ ಪಾವತಿ, ನಕಲಿ ಬಿಲ್‌ಗಳನ್ನು ತಯಾರಿಸಿ, ಬಿಲ್‌ಗಳಿಲ್ಲದೇ ಎಂಟರ್ ಪ್ರೈಸಸ್ ಗಳಿಗೆ ಹಣ ಪಾವತಿ, ನಕಲಿ ದಾಖಲೆಗಳಿಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಪ್ರಕರಣದಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ-1988 ರಡಿ ಲೋಕಾಯುಕ್ತ ಪ್ರಕರಣ ದಾಖಲೆ ಹಾಗೂ ಲೋಕಾಯುಕ್ತ ದಾಳಿ ಮೊ.ಸಂ. 06/2022 ರಲ್ಲಿ ಅಕ್ರಮ ಅಸಮತೋಲನ ಆಸ್ತಿ ಗಳಿಕೆ ಪ್ರಕರಣಗಳಲ್ಲಿ- ಶಿಸ್ತು ಕ್ರಮ ಜರುಗಿಸುವ ಕುರಿತು**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸದರಿ ವಿಷಯದ ಮೇಲೆ ಸುದೀರ್ಘವಾಗಿ ಚರ್ಚಿಸಿ ಶ್ರೀ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕರು, ಪ್ರಸ್ತುತ ಮೀನುಗಾರಿಕೆ ಮಹಾವಿದ್ಯಾಲಯ ಮಂಗಳೂರು ಇಲ್ಲಿ ಸೇವೆಯಲ್ಲಿರುವ ಇವರು ಈ ಹಿಂದೆ ದಿನಾಂಕ:01.02.2013 ರಿಂದ ಈ ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾಧಿಕಾರಿಗಳ ಕಚೇರಿಯಲ್ಲಿ ಸಹಾಯಕ ಹುದ್ದೆಗೆ ನೇಮಕ ಹೊಂದಿ ದಿನಾಂಕ:31.05.2019 ರಂದು ಹಿರಿಯ ಸಹಾಯಕ ಹುದ್ದೆಗೆ ಮುಂಬಡ್ತಿಗೊಂಡು ಅದೇ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಸದರಿ ಕಚೇರಿಯಲ್ಲಿ ಸೇವೆಯಲ್ಲಿರುವಾಗ ಇವರು ಹಣಕಾಸಿನ ಅವ್ಯವಹಾರ ಹಾಗೂ ದುರುಪಯೋಗದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದಲ್ಲಿ ಬೀದರ ಲೋಕಾಯುಕ್ತ (ಎಸಿಬಿ) ಠಾಣೆಯಲ್ಲಿ ದಾಖಲಾಗಿರುವ ಮೊ.ಸಂ.07/2021ಕ್ಕೆ ಸಂಬಂಧಿಸಿದಂತೆ ಪ್ರಕರಣದಲ್ಲಿನ ಆರೋಪಿತ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಂ 17(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ-1988 ರನ್ವಯ ಪೂರ್ವಾನುಮತಿಯನ್ನು ನೀಡಲು ಕೋರಿದ್ದು ಇವರುಗಳ ಖಾತೆಗೆ ಹಾಗೂ ಅವರುಗಳ ಕುಟುಂಬದ ಸದಸ್ಯರ ಖಾತೆಗೆ ಎಂಟರ್‌ಪ್ರೈಸೆಸ್‌ಗಳಿಂದ ಹಣ ವರ್ಗಾವಣೆಯಾಗಿದ್ದು, ಸರ್ಕಾರದಿಂದ ಬಂದ ಹಣವನ್ನು ದುರ್ಬಳಕೆ ಮಾಡಿರುವ ಬಗ್ಗೆ ದೃಢಪಟ್ಟಿರುತ್ತದೆ ಹಾಗೂ ಸದರಿ ಪ್ರಕರಣದ ಆರೋಪಿತ ಅಧಿಕಾರಿ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕ, ಹಣಕಾಸು ನಿಯಂತ್ರಣಾಧಿಕಾರಿಗಳ ಲೆಕ್ಕ ಶಾಖೆ ಕಪಪಮೀವಿವಿ, ನಂದಿನಗರ ಬೀದರ ರವರು, ಬೀದರ ಎಸಿಬಿ ಪೊಲೀಸ ಠಾಣೆಯಲ್ಲಿ ದಾಖಲಾದ ಮೊಕದ್ದಮೆ ಸಂ.07/2021, ಕಲಂ, 13(1)(c)(d) ಜೊತೆ 12(2) ಪಿ.ಸಿ(ತಿದ್ದುಪಡಿ-2018) ಕಾಯ್ದೆ-1988 & ಕಲಂ.120(ಬಿ), 406, 409,

418, 420, 465, 468, 471 ಐ.ಪಿ.ಸಿ ರಕ್ಕೆ ಪ್ರಕರಣದಲ್ಲಿ, ಕಪಪಮೀವಿವಿಯ ಹಾಗೂ ಅಧೀನ ಸಂಸ್ಥೆಗಳಿಗೆ ವಿವಿಧ ಎಂಟರಪ್ರೈಸೇಸ್‌ಗಳಿಂದ ಸಾಮಾಗ್ರಿಗಳನ್ನು ಖರೀದಿ ಮಾಡದೇ, ನಕಲಿ ಬಿಲ್‌ಗಳನ್ನು ತಯಾರಿಸಿ, ಬಿಲ್‌ಗಳಿಲ್ಲದೇ ಎಂಟರಪ್ರೈಸೇಸ್ಗಳಿಗೆ ಹಣ ಪಾವತಿ, ನಕಲಿ ದಾಖಲೆಗಳಿಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಪ್ರಕರಣದಲ್ಲಿ ಮೇಲ್ಕಂಡ ಆರೋಪಿತ ವಿರುದ್ಧ ಕಲಂ.17(ಎ) ಅಡಿ ಕಾನೂನು ಅನುಮತಿ ಪಡೆದಿರುವುದರಿಂದ, ಸದ್ಯ ಪ್ರಕರಣವು ವಿಚಾರಣೆಯಲ್ಲಿದೆ.

ಆರೋಪಿತ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ ಇವರ ವಿರುದ್ಧ ದಾಖಲಾದ ಅಕ್ರಮ ಅಸಮತೋಲನ ಆಸ್ತಿ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ಒದಗಿಸುವ ಕುರಿತು ಪ್ರಕರಣ ತನಿಖೆಯನ್ನು ಪೂರ್ಣಗೊಳಿಸಿರುವ ತನಿಖಾಧಿಕಾರಿಗಳು ಅಂತಿಮ ವರದಿಯ ಪ್ರಕಾರ ಕರ್ನಾಟಕ ಲೋಕಾಯುಕ್ತ, ಬೀದರ **ಮೊ.ಸಂ. 06/2022** ರ ಆರೋಪಿತ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ ಇವರ ವಿರುದ್ಧ ದಾಖಲಾದ ಅಕ್ರಮ ಅಸಮತೋಲನ ಆಸ್ತಿ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ಒದಗಿಸುವ ಕುರಿತು ಆಪಾದಿತ ನೌಕರನ ವಿರುದ್ಧ ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 (ತಿದ್ದುಪಡಿ ಕಾಯಿದೆ 2018) ರ ಕಲಂ 13 (1)(ಬಿ) ಜೊತೆಗೆ 13 (2) ರಡಿಯಲ್ಲಿ ಅಪಾದನೆಗಳು ದೃಢಪಟ್ಟಿರುತ್ತವೆ ಎಂದು ಪತ್ರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿಯನ್ನು ದಾಖಲಾತಿ ಸಮೇತ ನೀಡಿರುತ್ತಾರೆ.

ಆರೋಪಿತ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ ಇವರ ವಿರುದ್ಧ ದಾಖಲಾದ ಅಕ್ರಮ ಅಸಮತೋಲನ ಆಸ್ತಿ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ಒದಗಿಸುವ ಕುರಿತು ಇವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 (ತಿದ್ದುಪಡಿ ಕಾಯ್ದೆ 2018) ರ ಕಲಂ 13 (1)(ಬಿ) ಜೊತೆಗೆ 13 (2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನೆ ಕಾಯ್ದೆ 1988 (ತಿದ್ದುಪಡಿ ಕಾಯ್ದೆ 2018) ಕಲಂ 19 (1) ರನ್ವಯ ಅಭಿಯೋಜನಾ ಮಂಜೂರಾತಿಯನ್ನು ನೀಡಲು ಮೂಲ ಅಂತಿಮ ತನಿಖೆ ವರದಿ ಮತ್ತು ಅದರೊಂದಿಗಿನ ಅಡಕಗಳನ್ನು ಲಗತ್ತಿಸಿ ದಿನಾಂಕ 26-06-2025 ರಂದು ಕುಲಪತಿಗಳು, ಕಪಪಮೀವಿವಿ, ಬೀದರ ಇವರಿಗೆ ಸದರಿ ಪತ್ರದ ಜೊತೆಗೆ ಬೀದರ ಕರ್ನಾಟಕ ಲೋಕಾಯುಕ್ತ ಪೋಲಿಸ್ ಠಾಣೆ ಗುನ್ನೆ ನಂ. 06/2022 ಕಲಂ 13 (1) (ಬಿ) ಜೊತೆ 13 (2) ಲಂಚ ಪ್ರತಿಬಂಧಕ (ತಿದ್ದುಪಡಿ 2018) ಕಾಯ್ದೆ 1988 ಪ್ರಕರಣದ ತನಿಖಾ ವರದಿಯೊಂದಿಗಿನ ಕಾಗದ ಪತ್ರಗಳ ಯಾದಿ ( ಪ್ರಕರಣ ಅಂತಿಮ ತನಿಖಾ ವರದಿ ದಿನಾಂಕ 31-12-2024 ಪುಟ ಸಂಖ್ಯೆ 1CLIV (1-154), ಅಭಿಯೋಜನೆಗೆ ಪೂರಕವಾದ ದಾಖಲೆಗಳು ಹಾಗೂ ಇನ್ನಿತರ ದಾಖಲೆಗಳು 01 ರಿಂದ 1199 ಎಂದು ನಮೂದಿಸಿ ಕುಲಪತಿಗಳಿಗೆ ಸಲ್ಲಿಸಿರುತ್ತಾರೆ.

ಪ್ರಕರಣದ ತನಿಖಾಧಿಕಾರಿ ಅಂತಿಮ ತನಿಖಾ ವರದಿಯಲ್ಲಿ (ಪುಟ ಸಂಖ್ಯೆ 52) ಈ ಕೆಳಕಂಡಂತೆ ನಮೂದಿಸಿರುತ್ತಾರೆ.

**ಆಪಾದಿತನು ಚೆಕ್ ಅವಧಿಯಲ್ಲಿ ಹೊಂದಿದ ಆಸ್ತಿ, ಸ್ಥಿರ ಮತ್ತು ಚರಾಸ್ತಿ, ಖರ್ಚು ಮತ್ತು ಆದಾಯದ ಕುರಿತು ತನಿಖೆಯಲ್ಲಿ ಕಂಡು ಬಂದ ಘೋಷ್ವಾರದ ವಿವರ:**

| ಕ್ರ. ಸಂ. | ಒಟ್ಟು ಆಸ್ತಿ/ಆದಾಯ/ಖರ್ಚಿನ ವಿವರ | ತನಿಖೆಯಲ್ಲಿ ಕಂಡುಬಂದ ಮೌಲ್ಯ |
|---|---|---|
| 1 | ಆಪಾದಿತ ಅಧಿಕಾರಿಯು ಪರಿಶೀಲನಾ ಅವಧಿಯ ಪೂರ್ವದಲ್ಲಿ ಹೊಂದಿದ ಆಸ್ತಿಗಳ ಮೌಲ್ಯ. (Assets prior to check period, Statement 'A') | 34,85,930=00 |
| 2 | ಆಪಾದಿತ ಅಧಿಕಾರಿಯು ಪರಿಶೀಲನಾ ಅವಧಿಯ ಅಂತ್ಯಕ್ಕೆ ಅರ್ಜಿಸಿದ ಒಟ್ಟು ಆಸ್ತಿಗಳ ಮೌಲ್ಯ. (Assets acquired during end of the check period, Statement 'B') | 2,11,81,908-00 |
| 3 | ಆಪಾದಿತ ಅಧಿಕಾರಿಯು ಪರಿಶೀಲನಾ ಅವಧಿಯಲ್ಲಿ ನ್ಯಾಯಸಮ್ಮತವಾಗಿ ಗಳಿಸಿದ ಆದಾಯ (Income earned during check period, Statement 'C') | 38,13,316-00 |
| 4 | ಆಪಾದಿತ ಅಧಿಕಾರಿಯು ಪರಿಶೀಲನಾ ಅವಧಿಯಲ್ಲಿ ಮಾಡಿದ ಖರ್ಚುಗಳ ಮೌಲ್ಯ (Expenses incurred during check period, Statement 'D') | 21,59,923-00 |
| 5 | ಆಪಾದಿತ ಅಧಿಕಾರಿಯು ಪರಿಶೀಲನಾ ಅವಧಿಯಲ್ಲಿ ಅಕ್ರಮವಾಗಿ ಗಳಿಸಿದ ಅಸಮತೋಲನ (Disproportionate Assets {(B-A+D)-C)}) | 1,60,42,585-00 |
| 6 | **ಆಪಾದಿತ ಅಧಿಕಾರಿಯು ಸಂಪಾದಿಸಿದ ಅಕ್ರಮ ಆಸ್ತಿಗಳ ಶೇಕಡಾ ಮೌಲ್ಯ (Percentage of DA { (DA/C) X 100)** | **420.69%** |

ಪ್ರಕರಣದ ಅಂತಿಮ ತನಿಖಾ ವರದಿಯಲ್ಲಿ (ಪುಟ ಸಂಖ್ಯೆ 53 ) ತನಿಖಾಧಿಕಾರಿಗಳು ಅಭಿಯೋಜನೆಗೆ ಈ ಕೆಳಕಂಡಂತೆ ನಮೂದಿಸಿರುತ್ತಾರೆ.

- ಸದರಿ ಪ್ರಕರಣದ ತನಿಖೆಯಲ್ಲಿ ಆರೋಪಿತ ಅಧಿಕಾರಿ ಶ್ರೀ ಮೃತ್ಯುಂಜಯ ತಿರಣಿ ರವರು ತಮ್ಮ ಸೇವಾ ಅವಧಿಯಲ್ಲಿ (ಚೆಕ್ ಅವಧಿ ದಿನಾಂಕ:01-02-2013 ರಿಂದ ದಿನಾಂಕ:17-06-2022) ತನ್ನ ಮತ್ತು ತನ್ನ ಕುಟುಂಬ ಸದಸ್ಯರ ಹೆಸರಿನಲ್ಲಿನ ಸ್ಥಿರಾಸ್ತಿ, ಚರಾಸ್ತಿ, ಆದಾಯ ಮತ್ತು ಖರ್ಚು ವೆಚ್ಚಗಳನ್ನು ಪ್ರತ್ಯೇಕವಾಗಿ ಲೆಕ್ಕಾಚಾರ ಮಾಡಿದಾಗ,
- (A) ಚೆಕ್ ಪೂರ್ವದಲ್ಲಿ ಹೊಂದಿರುವ ಆಸ್ತಿ ಮೌಲ್ಯ ರೂ.34,85,930=00 ಗಳಾಗುತ್ತಿದ್ದು,
- (B) ಚೆಕ್ ಅವಧಿಯ ಅಂತ್ಯಕ್ಕೆ ಸ್ಥಿರ ಮತ್ತು ಚರಾಸ್ತಿಯ ಮೌಲ್ಯ ರೂ.2,11,81,908=00 ಗಳಾಗುತ್ತದೆ.
- (C) ಆಪಾದಿತ ಅಧಿಕಾರಿಯವರ ನ್ಯಾಯಾಸಮ್ಮತ ಆದಾಯ ರೂ.38,13,316=00 ಗಳಾಗಿದ್ದು,
- (D) ಆಪಾದಿತ ಅಧಿಕಾರಿಯವರ ಚೆಕ್ ಅವಧಿಯ ಖರ್ಚು ರೂ.21,59,923=00 ಗಳಾಗಿದ್ದು,
- ಹೀಗೆ ಒಟ್ಟು ಸ್ಥಿರಾಸ್ತಿ, ಚರಾಸ್ತಿ ಮತ್ತು ಖರ್ಚು ಸೇರಿ ಲೆಕ್ಕಾ ಹಾಕಿದಾಗ **ಒಟ್ಟು ರೂ.2,33,41,831=00** ಗಳಾಗಿರುತ್ತವೆ. ಅದರಲ್ಲಿ ಅಪಾದಿತ ಅಧಿಕಾರಿಯವರ ಪಿತ್ರಾರ್ಜಿತ ಆಸ್ತಿ **ರೂ.34,85,930=00** ಹಾಗೂ ನ್ಯಾಯಾಸಮ್ಮತ ಆದಾಯ **ರೂ.38,13,316=00** ಗಳನ್ನು ಕಳೆದಾಗ, ಆಪಾದಿತ ಅಧಿಕಾರಿ ಶ್ರೀ ಮೃತ್ಯುಂಜಯ ರವರ ಅಸಮತೋಲನ ಆಸ್ತಿಯ ಮೌಲ್ಯ **ರೂ.1,60,42,585=00** ಗಳು ಆಗಿರುತ್ತದೆ. ಅಂದರೇ ಶೇಕಡಾವಾರು **420.69%** ರಷ್ಟು ಹೆಚ್ಚಾಗಿರುತ್ತದೆ.
- ಸದರಿ ಪ್ರಕರಣದಲ್ಲಿ ಈ ಮೇಲಿನ ಅಂಶಗಳಿಂದ ಆಪಾದಿತ ಅಧಿಕಾರಿ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕ, ಹಣಕಾಸು ನಿಯಂತ್ರಣಾಧಿಕಾರಿಗಳ ಲೆಕ್ಕ ಶಾಖೆ ಕಪಪಮೀವಿವಿ, ನಂದಿನಗರ ಬೀದರ ರವರು **ತನ್ನ ಸೇವಾ ಅವಧಿ ದಿನಾಂಕ:01-02-2013 ರಿಂದ 17-06-2022 ರ ವರೆಗಿನ** ತನ್ನ ಸೇವಾ ಅವಧಿಯಲ್ಲಿ ಬಲ್ಲ ಮೂಲಗಳಿಗಿಂತ **ರೂ.1,60,42,585/-(ಶೇ.420.69%)** ಗಳಷ್ಟು ಹೆಚ್ಚಿನ ಆಸ್ತಿ ಗಳಿಸಿರುವ ಬಗ್ಗೆ ಪ್ರಕರಣದ ತನಿಖಾ ಕಾಲಕ್ಕೆ ಸಂಗ್ರಹಿಸಿದ ಆಪಾದಿತನ ಆಸ್ತಿ, ಆದಾಯ, ಖರ್ಚಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆ/ಕಛೇರಿಗಳಿಂದ ಪಡೆದ ದಾಖಲೆಗಳಿಂದ ಹಾಗೂ ಎಲ್ಲಾ ಸಾಂದರ್ಭಿಕ ಸಾಕ್ಷಿಗಳಿಂದ ತನಿಖಾಧಿಕಾರಿಯವರು ಇಲ್ಲಿಯವರೆಗೆ ನಡೆಸಿದ ತನಿಖೆಯಲ್ಲಿ, ಸದರಿ ಆಪಾದಿತನು ಎಸಗಿರುವ ಅಪರಾಧ ಸಾಬೀತಾಗಿದ್ದು, ಕಲಂ 13(1)(ಬಿ) ಜೊತೆ 13(2) ಲಂಚ ಪ್ರತಿಬಂಧಕ ಕಾಯ್ದೆ-1988 (ತಿದ್ದುಪಡಿ 2018) ರ ಪ್ರಕಾರ ಅಪರಾಧವೆಸಗಿರುವುದು ಪ್ರಕರಣದಲ್ಲಿ ದೃಢಪಟ್ಟಿರುತ್ತದೆ.

ಪ್ರಕರಣದ ತನಿಖಾಧಿಕಾರಿ ಅಂತಿಮ ತನಿಖಾ ವರದಿಯಲ್ಲಿ ಈ ಕೆಳಕಂಡಂತೆ ಅಂತಿಮ ಶಿಫಾರಸ್ಸುಗಳನ್ನು ನಮೂದಿಸಿರುತ್ತಾರೆ.

ಪ್ರಕರಣದ ತನಿಖಾ ಕಾಲಕ್ಕೆ ಸಂಗ್ರಹಿಸಿರುವ ದಾಖಲೆಗಳು ಹಾಗೂ ಇತರೆ ಸಾಕ್ಷ್ಯಾಧಾರಗಳಿಂದ ಆರೋಪಿತ ಅಧಿಕಾರಿ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕ, ಹಣಕಾಸು ನಿಯಂತ್ರಣಾಧಿಕಾರಿಗಳ ಲೆಕ್ಕ ಶಾಖೆ, ಕಪಪಮೀವಿವಿ, ನಂದಿನಗರ ಬೀದರ ಇವರು ತಮ್ಮ ಸರ್ಕಾರಿ ಸೇವೆಯ (ಚಕ್ ಅವಧಿ ದಿನಾಂಕ 01-02-2013 ರಿಂದ 17-06-2022 ವರೆಗಿನ) ಅವಧಿಯಲ್ಲಿ ತಮ್ಮ ಅಧಿಕಾರದ ಬಲದಿಂದ ಬಲ್ಲ ಮೂಲಗಳ ಆದಾಯಕ್ಕಿಂತ ವಿಭಿನ್ನ ರೂಪದ ಹೆಚ್ಚಿನ ಪ್ರಮಾಣದ (420.69%) ಅಸಮತೋಲನಾ ಆಸ್ತಿಗಳನ್ನು ಹೊಂದಿದ್ದು, ಸದರಿ ಆಸ್ತಿಗಳ ಬಗ್ಗೆ ಸಮರ್ಥನಿಯ ಲೆಕ್ಕ ನೀಡಲು ವಿಫಲರಾಗಿ, ಕಲಂ.13 (1)(ಬಿ) ಸಂಗಡ 13 (2) ಲಂಚ ಪ್ರತಿಬಂಧಕ ಕಾಯ್ದೆ- 1988 (ತಿದ್ದುಪಡಿ ಕಾಯ್ದೆ-2018) ರ ಮೇರೆಗೆ ಅಪರಾಧ ಎಸಗಿರುವುದು ತನಿಖೆ/ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

ಮುಂದುವರೆದು, ಕೃತ್ಯವೆಸಗಿದ ಸಮಯದಲ್ಲಿ ಆರೋಪಿತರನ್ನು ಸೇವೆಯಿಂದ ವಜಾಗೊಳಿಸುವ ಅಧಿಕಾರವನ್ನು ಹೊಂದಿರುವ ಸಕ್ಷಮ ಪ್ರಾಧಿಕಾರವು ಭ್ರಷ್ಟಾಚಾರ ನಿಮೂರ್ಲನಾ ಕಾಯಿದೆ 1988 (ತಿದ್ದುಪಡಿ ಕಾಯ್ದೆ 2018) ರ ಕಲಂ 13 (1)(ಬಿ) ಜೊತೆಗೆ 13 (2) ರಡಿಯಲ್ಲಿಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿಮೂರ್ಲನೆ ಕಾಯಿದೆ 1988 (ತಿದ್ದುಪಡಿ ಕಾಯ್ದೆ 2018 ) ಕಲಂ 19 (1) ರನ್ವಯ ಅಭಿಯೋಜನಾ ಮಂಜೂರಾತಿಯನ್ನು ನೀಡತಕ್ಕದು.

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಧಿನಿಯಮ 14 (1), 14 (6), 14 (8), 18 (ಎ), 28 (ಕೆ) ಹಾಗೂ ಪರಿನಿಯಮ 2009 14 (ಜಿ), 14 (ಎಲ್), 32 (ಡಿ), 32 (2) ರಿಂದ ಪ್ರದತ್ತವಾದ ಆಧಿಕಾರದನ್ವಯ ವಿಶ್ವವಿದ್ಯಾಲಯದ ಕುಲಪತಿಗಳು ಮಾನ್ಯ ವ್ಯವಸ್ಥಾಪಕ ಮಂಡಳಿ ಅನುಮೋದನೆಯಂತೆ ವಿಶ್ವವಿದ್ಯಾಲಯದ ನೌಕರರನ್ನು ವಜಾಗೊಳಿಸುವ ಹಕ್ಕನ್ನು ಹೊಂದಿರುತ್ತಾರೆ. (Delegation of powers of the organization as to the Authority Competent to remove the Public Servant from his/her office, at the time when the offence was alleged to have been committed).

ಅಧಿಕೃತ ಜ್ಞಾಪನ ಸಂ: ಡಿಪಿಎಆರ್ 2ಸೇವಿಇ 98, ದಿನಾಂಕ 16-07-1998 ರಲ್ಲಿ ಹೇಳಿರುವಂತೆ ಸಕ್ಷಮ ಪ್ರಾಧಿಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ನಿಗದಿಪಡಿಸಿರುವ ಕಡ್ಡಾಯ ಕಾಲಮಿತಿಯಾದ ಮೂರು ತಿಂಗಳ ಒಳಗಾಗಿ ಅಭಿಯೋಜನಾ ಮಂಜೂರಾತಿ ಆದೇಶವನ್ನು ಜಾರಿಗೊಳಿಸಬೇಕು. ಅದರಂತೆ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 15-09-2025 ರಂದು ಜರುಗಿದ ವಿಶ್ವವಿದ್ಯಾಲಯದ 122ನೇ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ ಸಂಪೂರ್ಣ ಮಾಹಿತಿಯೊಂದಿಗೆ ಸವಿವರವಾದ ದಾಖಲೆಯೊಂದಿಗೆ

ಪ್ರಕರಣ ಕುರಿತು ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನೆ ಕಾಯಿದೆ 1988 (ತಿದ್ದುಪಡಿ ಕಾಯ್ದೆ 2018) ಕಲಂ 19 (1) ರನ್ವಯ ಅಭಿಯೋಜನಾ ಮಂಜೂರಾತಿಯನ್ನು ನೀಡಲು ಕೋರಲಾಗಿತ್ತು. ಮಾನ್ಯ ವ್ಯವಸ್ಥಾಪಕ ಮಂಡಳಿ ಸದರಿ ಪ್ರಕರಣದ ವಿಷಯದ ಮೇಲೆ ಸುದೀರ್ಘವಾಗಿ ಚರ್ಚಿಸಿ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಧಿನಿಯಮ 14 (1), 14 (6), 14 (8), 18 (ಎ), 28 (ಕೆ) ಹಾಗೂ ಪರಿನಿಯಮ 2009, 14 (ಜಿ), 14 (ಎಲ್), 32 (ಡಿ), 32 (2) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ ಇವರ ವಿರುದ್ಧ ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 (ತಿದ್ದುಪಡಿ ಕಾಯಿದೆ 2018) ರ ಕಲಂ 13 (1)(ಬಿ) ಜೊತೆಗೆ 13 (2) ರಡಿಯುಲ್ಲಿ ಅಪಾದನೆಗಳು ದೃಡಪಟ್ಟಿರುವದರಿಂದ ಇವರಿಗೆ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988 (ತಿದ್ದುಪಡಿ ಕಾಯ್ದೆ 2018) ರ ಕಲಂ 13 (1)(ಬಿ) ಜೊತೆಗೆ 13 (2) ರಡಿಯುಲ್ಲಿಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನೆ ಕಾಯಿದೆ 1988 (ತಿದ್ದುಪಡಿ ಕಾಯ್ದೆ 2018 ) ಕಲಂ 19 (1) ರನ್ವಯ ಅಭಿಯೋಜನಾ ಮಂಜೂರಾತಿಯನ್ನು ನೀಡಿರುತ್ತದೆ.

ಪ್ರಕರಣದಲ್ಲಿ ಆರೋಪಿತ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರವರು ವಿಶ್ವವಿದ್ಯಾಲಯದಲ್ಲಿ ಅವ್ಯವಹಾರ ಮಾಡಿ ತನ್ನ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡು ಇಲಾಖೆಯ ಕೆಲವು ಜನರೊಂದಿಗೆ ಸೇರಿ ವಿಶ್ವವಿದ್ಯಾಲಯದ ಅನುದಾನವನ್ನು ಬಳಸಿಕೊಂಡು ನಕಲು ಎಂಟರಪ್ರೈಸೆಸ್‌ಗಳನ್ನು ಹುಟ್ಟು ಹಾಕಿ ಆ ಮುಖಾಂತರ ತನ್ನ ಕುಟುಂಬ ಸದಸ್ಯರ ಹೆಸರಿನಲ್ಲಿ ವಿವಿಧ ಬ್ಯಾಂಕ್ ಖಾತೆಗಳಿಗೆ ಅನುದಾನದ ಹಣವನ್ನು ವರ್ಗಾಯಿಸಿರುವುದು ಬ್ಯಾಂಕ್ ಅಕೌಂಟ್ ಸ್ಟೇಟಮೆಂಟ್‌ಗಳಿಂದ ಮತ್ತು ತನಿಖೆಯಲ್ಲಿ ಸಂಗ್ರಹಿಸಿದ ದಾಖಲಾತಿಗಳಿಂದ ದೃಢಪಟ್ಟಿರುತ್ತದೆ. ಸದರಿ ಅವ್ಯವಹಾರದ ಹಣವನ್ನು ಬಳಸಿಕೊಂಡು ವಿವಿಧ ರೀತಿಯ ಆಸ್ತಿಗಳನ್ನು ಖರೀದಿಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿರುತ್ತದೆ. ಪ್ರಕರಣದ ತನಿಖಾ ಕಾಲಕ್ಕೆ ಸಂಗ್ರಹಿಸಿರುವ ದಾಖಲೆಗಳು ಹಾಗೂ ಇತರೆ ಸಾಕ್ಷ್ಯಾಧಾರಗಳಿಂದ ಆರೋಪಿತ ಅಧಿಕಾರಿ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕ, ಹಣಕಾಸು ನಿಯಂತ್ರಣಾಧಿಕಾರಿಗಳ ಲೆಕ್ಕ ಶಾಖೆ, ಕಪಪಮೀವಿವಿ, ನಂದಿನಗರ ಬೀದರ ಇವರು ತಮ್ಮ ಸರ್ಕಾರಿ ಸೇವೆಯ (ಚಕ್ ಅವಧಿ ದಿನಾಂಕ 01-02-2013 ರಿಂದ 17-06-2022 ವರೆಗಿನ) ಅವಧಿಯಲ್ಲಿ ತಮ್ಮ ಅಧಿಕಾರದ ಬಲದಿಂದ ಬಲ್ಲ ಮೂಲಗಳ ಆದಾಯಕ್ಕಿಂತ ವಿಭಿನ್ನ ರೂಪದ ಹೆಚ್ಚಿನ ಪ್ರಮಾಣದ (420.69%) ಅಸಮತೋಲನಾ ಆಸ್ತಿಗಳನ್ನು ಹೊಂದಿದ್ದು, ಸದರಿ ಆಸ್ತಿಗಳ ಬಗ್ಗೆ ಸಮರ್ಥನಿಯ ಲೆಕ್ಕ ನೀಡಲು ವಿಫಲರಾಗಿ, ಕಲಂ.13 (1)(ಬಿ) ಸಂಗಡ 13 (2) ಲಂಚ ಪ್ರತಿಬಂಧಕ ಕಾಯ್ದೆ- 1988 (ತಿದ್ದುಪಡಿ ಕಾಯ್ದೆ-2018) ರ ಮೇರೆಗೆ ಅಪರಾಧ ಎಸಗಿರುವುದು ತನಿಖೆ/ದಾಖಲಾತಿಗಳಿಂದ ದೃಢಪಟ್ಟಿರುತ್ತದೆ. **ಅಂದರೆ ಶೇ *420.69%* ರಷ್ಟು ಆಕ್ರಮ ಆಸ್ತಿ ಹೊಂದಿರುವುದು ಅಂತಿಮ ವರದಿ ಹಾಗೂ ಸಂಬಂಧಪಟ್ಟ ದಾಖಲಾತಿಯಿಂದ ಸಾಬೀತಾಗಿರುತ್ತದೆ**." ಪೋಲಿಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ ರವರ ಪ್ರಕರಣದ ಅಂತಿಮ ತನಿಖಾ ವರದಿಯಲ್ಲಿ (ಪುಟ ಸಂಖ್ಯೆ 52-55) ತನಿಖಾಧಿಕಾರಿಗಳು ನಮೂದಿಸಿರುವಂತ "ಪ್ರಕರಣದ ಆಪಾದಿತ ನೌಕರರಾದ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರವರು ತನ್ನ ಪರಿಶೀಲನಾ ಅವಧಿಯಲ್ಲಿ **ಶೇ 420.69% ರಷ್ಟು ಆಕ್ರಮ ಅಸ್ತಿಯನ್ನು ಹೊಂದಿರುವುದು ತನಿಖೆಯಲ್ಲಿ ಸಂಗ್ರಹಿಸಿದ ಸಾಕ್ಷಾಧಾರಗಳಿದಂದ ಕೂಡ ದೃಢಪಟ್ಟಿರುತ್ತದೆ.**

ಕಾರಣ ಸದರಿ ಆರೋಪಿತ ನೌಕರನ ವಿರುದ್ಧ ಮಾನ್ಯ ಘನ ನ್ಯಾಯಾಲಯಕ್ಕೆ ಕಲಂ 13 (1) (ಬಿ) ಜೊತೆ 13 (2) ಪಿ.ಸಿ. ಕಾಯ್ದೆ 1988 (ತಿದ್ದುಪಡಿ 2018) ರ ಅಡಿಯಲ್ಲಿ ದೋಷಾರೋಪಣೆ ಪತ್ರ ಸಲ್ಲಿಸಬೇಕಿದ್ದು, ಆರೋಪಿತ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ ಸದ್ಯ ನಿವೇಶನ ಸಂಖ್ಯೆ: 41, ಸಿ.ಎಂ.ಸಿ. ನಂ. 12-2-114/29, ಎಸ್.ಬಿ.ಗುಮ್ಮೆ ಕಾಲೋನಿ. ಬೀದರರವರನ್ನು ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕ ವಾಗಿರುವದೆಂದು ಸಲ್ಲಿಸಿದ ಮನವಿಯನ್ನು ನಿಯಮಾವಳಿಗಳಂತೆ ಪರಿಶೀಲಿಸಿ ವಿಶ್ವವಿದ್ಯಾಲಯ ಸಕ್ಷಮ ಪ್ರಾಧಿಕಾರವು ತನಿಖಾಧಿಕಾರಿಯ ವರದಿಯನ್ನು ಒಪ್ಪಿ ಅಭಿಯೋಜನೆಗೆ ಸಹಮತಿಸಲಾಗಿರುತ್ತದೆ. ಅದರಂತೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಧಿನಿಯಮ 2004 ಕಲಂ 14 (1), 14 (6), 14 (8), 18 (ಎ), 28 (ಕೆ) ಹಾಗೂ ಪರಿನಿಯಮ 2009 14 (ಜಿ), 14 (ಎಲ್), 32 (ಡಿ), 32 (2) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತ ಮೃತ್ಯುಂಜಯ ತಂದೆ ಚನ್ನಬಸಯ್ಯಾ ತಿರಣಿ, ಹಿರಿಯ ಸಹಾಯಕ, ಲೆಕ್ಕ ಶಾಖೆ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ ಸದ್ಯ ನಿವೇಶನ ಸಂಖ್ಯೆ: 41, ಸಿ.ಎಂ.ಸಿ. ನಂ. 12-2-114/29, ಎಸ್.ಬಿ.ಗುಮ್ಮೆ ಕಾಲೋನಿ. ಬೀದರರವರ ವಿರುದ್ಧ **ಮೊ.ಸಂ.06/2022 ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 (ತಿದ್ದುಪಡಿ ಕಾಯಿದೆ 2018) ರ ಕಲಂ 13 (1)(ಬಿ) ಜೊತೆಗೆ 13 (2) ರಡಿಯುಲ್ಲಿ ಅಪಾದನೆಗಳು ದೃಢಪಟ್ಟಿರುವದರಿಂದ ಇವರಿಗೆ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988 (ತಿದ್ದುಪಡಿ ಕಾಯ್ದೆ 2018) ರ ಕಲಂ 13 (1)(ಬಿ) ಜೊತೆಗೆ 13 (2) ರಡಿಯುಲ್ಲಿಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನೆ ಕಾಯಿದೆ 1988 (ತಿದ್ದುಪಡಿ ಕಾಯ್ದೆ 2018 ) ಕಲಂ 19 (1) ರನ್ವಯ ಅಭಿಯೋಜನಾ ಮಂಜೂರಾತಿಯನ್ನು ನೀಡಿ ದಿನಾಂಕ: 17.09.2025 ರಂದು ಆದೇಶಿಸಲಾಗಿದೆ.**

ಮುಂದುವರೆದು, ಸದರಿ ಮೇಲಿನ ಆಪಾದನೆಗಳಂತೆ ಕುಲಸಚಿವರ ಆದೇಶ ದಿನಾಂಕ: 20.07.2022 ರಂತೆ ಇಲಾಖಾ ವಿಚಾರಣಾ ಸಮಿತಿಯನ್ನು ರಚಿಸಿ ಸದರಿ ಆಪಾದಿತರ ನೌಕರರ ವಿರುದ್ಧ ದಿನಾಂಕ: 01.02.2013 ರಿಂದ 26.01.2022 ರವರೆಗೆ ಹಣಕಾಸು ನಿಯಂತ್ರಣಾಧಿಕಾರಿಗಳ ಕಚೇರಿಯಲ್ಲಿ ಅವ್ಯವಹಾರದ ಕುರಿತು ವಿಚಾರಣೆ ನಡೆಸಿ ನಿಯಮಾವಳಿ ಪ್ರಕಾರ ವರದಿ ಮತ್ತು ಆಪಾದಿತ ಸಿಬ್ಬಂದಿಯ ಅವ್ಯವಹಾರ ಸಾಬೀತಾದಲ್ಲಿ ಶಿಸ್ತು ಕ್ರಮ ಜರುಗಿಸಲು ಶಿಫಾರಸು ಮಾಡಲು ಸದರಿ ಸಮಿತಿಗೆ ನಿರ್ದೇಶನ ನೀಡಲಾಗಿದೆ. ಕುಲಸಚಿವರ ಆದೇಶದಂತೆ, ದಿನಾಂಕ: 24.07.2024 ರಂದು ಸಮಿತಿ ಅಧ್ಯಕ್ಷರು ಕುಲಸಚಿವರಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿ (ದಿನಾಂಕ: 21.06.2024) ಅವ್ಯಹಾರದ ಕುರಿತು ವಿಚಾರಣೆ ನಡೆಸಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

ಶ್ರೀ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕರು, ಕಪಪಮೀವಿವಿ, ಬೀದರ ಇವರಿಗೆ ಸಂಬಂಧಿಸಿದ ವಿಚಾರಣೆ ವರದಿಯಲ್ಲಿ ನಮೂದಿಸಿರುವ ಹಾಗೂ ರೂಢಿಯಾಗಿರುವ ವಿಷಯಗಳು ಕರ್ನಾಟಕ ಆರ್ಥಿಕ ಸಂಹಿತ 1958ರ ಅನುಚೇದಗಳ ಉಲಂಘನೆಯಾಗಿರುತ್ತದೆ. ಕಾರಣ ಸದರಿಯವರ ಮೇಲೆ ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳ 2021 ಅನುಚೇದ 20 ರ ಪ್ರಕಾರ ವಿಶ್ವವಿದ್ಯಾಲಯವು ಸೂಕ್ತ ಶಿಸ್ತು ಕ್ರಮ ಜರುಗಿಸಲು ಸಮಿತಿಯವರು ಶಿಫಾರಸ್ಸು ಮಾಡಿರುತ್ತಾರೆ .

ಮುಂದುವರೆದು, ಸಮಿತಿಯು ಈ ಪ್ರಕರಣ ಕುರಿತು ಹಣಕಾಸು ನಿಯಂತ್ರಣಾಧಿಕಾರಿ ಕಚೇರಿಯಲ್ಲಿ ಸದರಿ ಅವರ ಹುದ್ದೆಗಳ ಪ್ರಭಾರವನ್ನು ವಹಿಸಿಕೊಳ್ಳಲು ಕುಲಸಚಿವರ ಆದೇಶ ದಿನಾಂಕ: 08.08.2023 ರಂತೆ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ದಿನಾಂಕ:17.08.2023 ರಂದು ನಡಾವಳಿಗಳನ್ನು ದಾಖಲಾತಿ ಸಮೇತ ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ದಾಖಲಾತಿಗಳನ್ನು ಪರಿಶೀಲಿಸುವಾಗ ಸದರಿ ಅವರ ಅಲ್‌ಮಾರಿಯಲ್ಲಿ (3 ಅಲ್‌ಮಾರಿದಲ್ಲಿರುವ ದಾಖಲಾತಿಗಳನ್ನು) ನಮೂದಿಸಿ ಹಾಗೂ ಸದರಿ ದಾಖಲಾತಿಗಳನ್ನು ಪರಿಶೀಲಿಸಿ ಕೋಟಾಂತರ ರೂಪಾಯಿ ಹಣಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಅನಧಿಕೃತವಾಗಿ ಸದರಿಯವರು ತನ್ನ ಅಧೀನದಲ್ಲಿ ಇಟ್ಟಿರುವುದು ಕಂಡು ಬಂದಿರುತ್ತದೆ. ಸಮಿತಿಯ ಅಧ್ಯಕ್ಷರು ದಿನಾಂಕ:20.11.2023 ರಂದು ಸಮಿತಿ ವರದಿಯನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ.

ಸದರಿ ಸಮಿತಿಯ ವರದಿ ಮೇಲೆ ವಿಶ್ವವಿದ್ಯಾಲಯದ ಕುಲಸಚಿವರ ದಿನಾಂಕ:16.01.2025 ರಂದು ಆರೋಪಿತ ನೌಕರರಾದ ಶ್ರೀ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕರು, ಕಪಪಮೀವಿವಿ, ಬೀದರ ರವರಿಗೆ ಕಾರಣ ಕೇಳಿ ನೋಟಿಸ್ ನೀಡಿ ವಿಚಾರಣೆ ವರದಿಯನ್ನು ಲಗತ್ತಿಸಿ ಸದರಿ ನೌಕರರ ಮೇಲೆ ಇರುವ ಆರೋಪಗಳ ಬಗ್ಗೆ ರಕ್ಷಣಾತ್ಮಕ ಹೇಳಿಕೆಗಳು ಏನಾದರೂ ಇದ್ದಲ್ಲಿ 7 ದಿವಸಗಳ ಒಳಗಾಗಿ ಸಲ್ಲಿಸಲು ಸೂಚಿಸಿಲಾಗಿತ್ತು, ತಪ್ಪಿದಲ್ಲಿ ಸದರಿಯವರ ಹೇಳಿಕೆ ಏನೂ ಇಲ್ಲವೆಂದು ಪುರಿಗಣಿಸಿ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಸೂಚಿಸಲಾಗಿತ್ತು. ವಿಶ್ವವಿದ್ಯಾಲಯವು ಸದರಿಯವರು 2ನೇ ನೋಟಿಸ್‌ಗೆ ದಿನಾಂಕ: 03.02.2025 ರಂದು ತಮ್ಮ ಹೇಳಿಕೆಯನ್ನು ಸಲ್ಲಿಸಿ ತನ್ನ ಮೇಲೆ ತಿಳಿಸಿದ ಆರೋಪಗಳ ಪಟ್ಟಿಯಿಂದ ಮುಕ್ತಿಗೊಳಿಸಿ ನನ್ನನ್ನು ನಿರಪರಾಧಿಯನ್ನಾಗಿ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸದರಿ ಶ್ರೀ ಮೃತ್ಯುಂಜಯ ರವರ ಮೇಲಿನ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಸದರಿಯವರ ಮೇಲೆ ಶಿಸ್ತು ಕ್ರಮ ಜರುಗಿಸಲು ಶಿಸ್ತು ವಿಚಾರಣಾ ಸಮಿತಿಯನ್ನು ಈ ಕಚೇರಿಯ ಆದೇಶ ಸಂಖ್ಯೆ: ಕುಸ/ಕಪಪಮೀವಿವಿ/ಶಿ.ಸ.ಶ್ರೀ. ಮೃ/2025-26/671 ದಿನಾಂಕ: 09.07.2025, 07.08.2025 ಹಾಗೂ 29.09.2025 ರಂತೆ ರಚನೆ ಮಾಡಲಾಯಿತು. ಸದರಿ ಸಮಿತಿಯು ಮೇಲಿನ ಎಲ್ಲಾ ಅಂಶಗಳನ್ನು ಕುಲಂಕುಶವಾಗಿ ಪರಿಶೀಲಿಸಿ ದಿನಾಂಕ:13.11.2025 ರಂದು ಈ ಕೆಳಗಿನಂತೆ ವರದಿಯನ್ನು ನೀಡಿರುತ್ತದೆ.

**ಶ್ರೀ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕರು, ಲೆಕ್ಕ ಶಾಖೆ ಕಪಪಮೀವಿವಿ, ಬೀದರ ಇವರಿಗೆ ಸಂಬಂಧಿಸಿದಂತೆ ಕರ್ನಾಟಕ ಆರ್ಥಿಕ ಸಂಹಿತ 1958 ರ ಅನುಚೇದಗಳ ಉಲಂಘನೆಯಾಗಿರುತ್ತದೆ. ಕಾರಣ ಸದರಿಯವರ ಮೇಲೆ ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳ 2021 ಅನುಚೇದ 20 ರ ಪ್ರಕಾರ ವಿಶ್ವವಿದ್ಯಾಲಯವು ಸೂಕ್ತ ಶಿಸ್ತು ಕ್ರಮ ಜರುಗಿಸಲು ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡಿರುವಂತೆ ವಿಶ್ವವಿದ್ಯಾಲಯದ ಹಂತದಲ್ಲಿಯೆ ಪರಿಶೀಲಿಸಿ, ಮಾನ್ಯ ವ್ಯವಸ್ಥಾಪಕ ಮಂಡಳಿಯಲ್ಲಿ ವಿಷಯವನ್ನು ಚರ್ಚೆಗೆ ಮಂಡಿಸಿ ವಿಚಾರಣಾ ವರದಿಯಂತೆ ಹಾಗೂ ಸರ್ಕಾರದ ನಿಯಮಾವಳಿಗಳನ್ವಯ ಶಿಸ್ತು ಕ್ರಮ ಜರುಗಿಸಲು ತಿಳಿಸಿರುತ್ತದೆ.**

ಈ ಮೇಲಿನ ಎಲ್ಲಾ ಅಂಶಗಳು ಹಾಗೂ ದಾಖಲಾತಿಗಳನ್ನು ವ್ಯವಸ್ಥಾಪಕ ಮಂಡಳಿಯು ಪರಿಶೀಲಿಸಲಾಗಿದ್ದು ಶ್ರೀ. ಮೃತ್ಯುಂಜಯ ತಿರಾನಿ, ಹಿರಿಯ ಸಹಾಯಕರವರಿಂದ ಕೆಳಕಂಡ ಉಲ್ಲಂಘನೆಗಳನ್ನು ಮಾಡಿರುವುದು ಶಿಸ್ತು ವಿಚಾರಣಾ ಸಮಿತಿಯಿಂದ ದೃಡೀಕರಿಸಿರುತ್ತದೆ.

- ➢ ಕರ್ನಾಟಕ ಆರ್ಥಿಕ ಸಂಹಿತೆ (ಕೆ.ಎಫ್.ಸಿ ) ನ್ನು ಉಲ್ಲಂಘನೆ ಆಗಿರುತ್ತದೆ.
- ➢ ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳ 2021 ಅನುಚ್ಛೇದ 3 (i), (ii), (iii) & (iv), 20 ರ ಪ್ರಕಾರ ಸೂಕ್ತ ಕ್ರಮ ಜರಗಿಸಬೇಕಾಗಿರುತ್ತದೆ.
- ➢ ಎಂ. ಸಿ. ಇ ನಿಯಮ 36 ಉಲ್ಲಂಘನೆ ಆಗಿರುತ್ತದೆ.
- ➢ ಕೆ.ಸಿ.ಎಸ್. ಆರ್, (ಸಿ.ಸಿ.ಎ) 1957 ಕಲಂ 8 (viii) ರಂತೆ ಸೇವೆಯಿಂದ ತೆಗೆದು ಹಾಕಬೇಕಾಗಿರುತ್ತದೆ.
- ➢ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 2004 ರಂತೆ ವಜಾಗೊಳಿಸಬೇಕಾಗಿರುತ್ತದೆ.
- ➢ ಸೇವೆಯಿಂದ ತೆಗೆದುಹಾಕಿದ ನಂತರ ವಿಶ್ವವಿದ್ಯಾಲಯಕ್ಕೆ ನಷ್ಟವಾದ ಮೊತ್ತವನ್ನು ಸದರಿಯವರಿಂದ ವಸೂಲಿ ಮಾಡಲು ಕ್ರಮಕೈಗೊಳಬೇಕಾಗಿದೆ.

ಆದುದರಿಂದ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಲಾದ ಶಿಕ್ಷೆಯಂತೆ ಸರ್ಕಾರಿ ಹಣದ ದುರುಪಯೋಗ ಮತ್ತು ತಪ್ಪು ಬಳಕೆ (ಕಪಪಮೀವಿವಿಯ ಹಾಗೂ ಅಧೀನ ಸಂಸ್ಥೆಗಳಿಗೆ ವಿವಿಧ ಎಂಟರಪ್ರೈಸೇಸ್‌ಗಳಿಂದ ಸಾಮಾಗ್ರಿಗಳನ್ನು ಖರೀದಿ ಮಾಡದೇ, ನಕಲಿ ಬಿಲ್‌ಗಳನ್ನು ತಯಾರಿಸಿ, ಬಿಲ್‌ಗಳಿಲ್ಲದೇ ಎಂಟರಪ್ರೈಸೇಸ್‌ಗ ಳಿಗೆ ಹಣ ಪಾವತಿ, ನಕಲಿ ದಾಖಲೆಗಳಿಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿ ಏಜೆನ್ಸಿ ಗಳೊಂದಿಗೆ ಶಾಮೀಲಾಗಿರುವ ಪ್ರಕರಣಗಳು) ಮಾಡಿ ಆರ್ಥಿಕ ಗಂಭೀರ ಅಪರಾಧ ಎಸಗಿರುವ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ಆರ್ಥಿಕ ಸಂಹಿತೆ (ಕೆ.ಎಫ್.ಸಿ ),ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳ 2021 ಅನುಚ್ಛೇದ 3 (i), (ii), (iii) & (iv), 20 ,ಎಂ. ಸಿ. ಇ ನಿಯಮ 36 ,ಕೆ.ಸಿ.ಎಸ್. ಆರ್, (ಸಿ.ಸಿ.ಎ) 1957 ಕಲಂ 8 (viii), ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಧಿನಿಯಮ 2004 ಕಲಂ 14 (1), 14 (6), 14 (8), 18 (ಎ), 28 (ಕೆ) ಹಾಗೂ ಪರಿನಿಯಮ 2009 14 (ಜಿ), 14 (ಎಲ್), 32 (ಡಿ), 32 (2) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಮೃತ್ಯುಂಜಯ ತಿರಣಿ , ಹಿರಿಯ ಸಹಾಯಕರು ಇವರನ್ನು ಸೇವೆಯಿಂದ ವಜಾ ಮಾಡಲು ಹಾಗೂ ದುರ್ಬಳಕೆಯಾಗಿರುವ ವಿಶ್ವವಿದ್ಯಾಲಯದ ಹಾಗೂ ಸರ್ಕಾರದ ಹಣವನ್ನು ಬಡ್ಡಿ ಸಮೇತ ವಸೂಲಾತಿ ಮಾಡಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

ಮುಂದುವರೆದು, ಶ್ರೀ ಮೃತ್ಯುಂಜಯ ತಿರಣಿ, ಹಿರಿಯ ಸಹಾಯಕ, ಹಣಕಾಸು ನಿಯಂತ್ರಣಾಧಿಕಾರಿಗಳ ಲೆಕ್ಕ ಶಾಖೆ ರವರ ವಿರುದ್ಧ ಎಸಿಬಿ ಪೊಲೀಸ ಠಾಣೆಯಲ್ಲಿ (ಪ್ರಸ್ತುತ ಲೋಕಾಯುಕ್ತ ಠಾಣೆ) ದಾಖಲಾದ ಮೊಕದ್ದಮೆ ಸಂ.07/2021, ಕಲಂ, 13(1)(c)(d) ಜೊತೆ 12(2) ಪಿ.ಸಿ(ತಿದ್ದುಪಡಿ-2018) ಕಾಯ್ದೆ-1988 & ಕಲಂ.120(ಬಿ), 406, 409, 418, 420, 465, 468, 471 ಐ.ಪಿ.ಸಿ ಪ್ರಕರಣದಲ್ಲಿ, ಕಪಪಮೀವಿವಿಯ ಹಾಗೂ ಅಧೀನ ಸಂಸ್ಥೆಗಳಿಗೆ ವಿವಿಧ ಎಂಟರಪ್ರೈಸೇಸ್‌ಗಳಿಂದ ಸಾಮಾಗ್ರಿಗಳನ್ನು ಖರೀದಿ ಮಾಡದೇ, ನಕಲಿ ಬಿಲ್‌ಗಳನ್ನು ತಯಾರಿಸಿ, ಬಿಲ್‌ಗಳಿಲ್ಲದೇ ಎಂಟರಪ್ರೈಸೇಸ್ಗಳಿಗೆ ಹಣ ಪಾವತಿ, ನಕಲಿ ದಾಖಲೆಗಳಿಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಪ್ರಕರಣ ಹಾಗೂ ಇವರ ವಿರುದ್ಧ ದಾಖಲಾದ ಅಕ್ರಮ ಅಸಮತೋಲನ ಆಸ್ತಿ ಪ್ರಕರಣ ಕರ್ನಾಟಕ ಲೋಕಾಯುಕ್ತ, ಬೀದರ ಮೊ.ಸಂ. 06/2022 ರ ಅಕ್ರಮ ಅಸಮತೋಲನ ಆಸ್ತಿ ಪ್ರಕರಣ ಅಂತಿಮ ತೀರ್ಪನ್ನು ಖಾಯ್ದಿರಿಸಿ ಸದರಿಯವರಿಂದ ವಿಶ್ವವಿದ್ಯಾಲಯಕ್ಕೆ ಆಗಿರುವ ನಷ್ಟವನ್ನು ನಿಯಮಗಳನ್ವಯ ಬಡ್ಡಿ ಸಮೇತ ವಸೂಲಾತಿ ಮಾಡಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ

ಕ್ರಮ:ಕುಸ

**Item No.06** **ಶ್ರೀ ಅರುಣ್, ಕಿರಿಯ ಅಭಿಯಂತರರು (ಕಾಮಗಾರಿ), ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ, ಇವರು 13 ವರ್ಷಗಳಿಂದ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿಕೊಳ್ಳದೇ ತೃಪ್ತಿಕರ ಸೇವಾವಧಿಯನ್ನು ಪೂರೈಸದೇ ಇರುವುದರಿಂದ ಸೇವೆಯಿಂದ ವಿಮುಕ್ತಿಗೊಳಿಸುವ ಬಗ್ಗೆ**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸದರಿ ವಿಷಯದ ಮೇಲೆ ಸುದೀರ್ಘವಾಗಿ ಚರ್ಚಿಸಿ ಶ್ರೀ.ಅರಣ್, ಕಿರಿಯ ಅಭಿಯಂತರರು (ಕಾಮಗಾರಿ), ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ರವರು No.R/KVAFSU(B)56BOM/Sp.Rectt-JE(c)/WL/12-13/4921, dated 11.02.2013 ರ ಆದೇಶದಂತೆ ದಿನಾಂಕ: 20.02.2013 ರಂದು ಕಿರಿಯ ಅಭಿಯಂತರರ (ಕಾಮಗಾರಿ) ಹುದ್ದೆಗೆ ದಿನಾಂಕ:20.02.2013 ರಂದು ವರದಿ ಮಾಡಿಕೊಂಡಿರುತ್ತಾರೆ. ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಸೇವೆಗೆ ಸೇರಿದ ಒಂದು ವರ್ಷದ ಸೇವಾ ಅರ್ಹತಾ ಪರೀಕ್ಷಾವಧಿ ಒಳಗಾಗಿ Accounts Higher, General Law Part-I & II ಮತ್ತು PWD Dept. Examination Part-I and II ವಿಷಯಗಳನ್ನು ಕರ್ನಾಟಕ ಲೋಕ ಸೇವಾ ಆಯೋಗ ಬೆಂಗಳೂರು ಇವರು ನಡೆಸುವ ಇಲಾಖಾ ಪರೀಕ್ಷೆಗಳಲ್ಲಿ ಪಾಸು ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಶ್ರೀ ಅರುಣ ರವರು ಸೇವೆಗೆ ಸೇರಿ 13 ವರ್ಷಗಳು ಗತಿಸಿದರೂ ಸಹ ಪಾಸು ಮಾಡಿಕೊಳ್ಳದೇ ಇರುವುರಿಂದ ನೇಮಕವಾದ ಹುದ್ದೆಯಲ್ಲಿ ಮುಂದುವರೆಯಲು ಅನರ್ಹರಾಗಿರುತ್ತಾರೆ. ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977 ರ ನಿಯಮ 4 ಮತ್ತು 5 ರಂತೆ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ಪ್ರೊಬೇಷನ್ ಅವಧಿಯಲ್ಲಿರುವ ನೌಕರನು ನಿಗದಿತ ಅವಧಿಯಲ್ಲಿ ಉತ್ತೀರ್ಣರಾಗದಿದ್ದಲ್ಲಿ ಸೇವೆಯಿಂದ ವಿಮುಕ್ತಗೊಳಿಸಲು ಅವಕಾಶವನ್ನು ಕಲ್ಪಿಸಿರುತ್ತದೆ. ಸದರಿ ನೌಕರರು ನಿಗದಿತ ಅವಧಿಯಲ್ಲಿ ಇಲಾಖಾ ಪರೀಕ್ಷೆ ಪಾಸು ಮಾಡಿಕೊಳ್ಳದೇ ಇರುವುದರಿಂದಾಗಿ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಾವಳಿ, ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು 1977, ಅಧಿಸೂಚನೆ ಸಂಖ್ಯೆ DPAR 307 SRR 2018, Dated: 01.07.2019, ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳ 2021. ಕೆ.ಸಿ.ಎಸ್. ಆರ್, (ಸಿ.ಸಿ.ಎ) 1957 ಕಲಂ 8 (vii), ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಧಿನಿಯಮ 2004 ಕಲಂ 14 (1), 14 (6), 14 (8), 18 (ಎ), 28 (ಕೆ) ಹಾಗೂ ಪರಿನಿಯಮ 2009 14 (ಜಿ), 14 (ಎಲ್), 32 (ಡಿ), 32 (2) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ. ಅರುಣ, ಕಿರಿಯ ಅಭಯಂತರರು, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಇವರನ್ನು ಸೇವೆಯಿಂದ ವಿಮುಕ್ತಗೊಳಿಸಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

ಮುಂದುವರೆದು, ಕಪಪಮೀವಿವಿ, ನಂದಿನಗರ ಬೀದರ ರವರು, ಬೀದರ ಎಸಿಬಿ ಪೊಲೀಸ ಠಾಣೆಯಲ್ಲಿ ದಾಖಲಾದ ಮೊಕದ್ದಮೆ ಸಂ.07/2021, ಕಲಂ, 13(1)©(d) ಜೊತೆ 12(2) ಪಿ.ಸಿ(ತಿದ್ದುಪಡಿ-2018) ಕಾಯ್ದೆ-1988 &

ಕಲಂ.120(ಬಿ), 406, 409, 418, 420, 465, 468, 471 ಐ.ಪಿ.ಸಿ ರಕ್ತೆ ಪ್ರಕರಣದಲ್ಲಿ, ಕಪಪಮೀವಿವಿಯ ಹಾಗೂ ಅಧೀನ ಸಂಸ್ಥೆಗಳಿಗೆ ವಿವಿಧ ಎಂಟರಪ್ರೈಸೇಸ್‌ಗಳಿಂದ ಸಾಮಾಗ್ರಿಗಳನ್ನು ಖರೀದಿ ಮಾಡದೇ, ಎಂಟರಪ್ರೈಸೇಸ್ಗಳಿಗೆ ಹಣ ಪಾವತಿ ಅಕ್ರಮವಾಗಿ ಮಾಡಿರುವ ಪ್ರಕರಣದಲ್ಲಿ ಮೇಲ್ಕಂಡ ಆರೋಪಿತ ವಿರುದ್ಧ ಕಲಂ.17(ಎ) ಅಡಿ ಕಾನೂನು ಅನುಮತಿ ಪಡೆದಿರುವುದರಿಂದ, ಸದ್ಯ ಪ್ರಕರಣವು ವಿಚಾರಣೆಯಲ್ಲಿದೆ ಅಂತಿಮ ತೀರ್ಪುನ್ನು ಖಾಯ್ದಿರಿಸಿ ಸದರಿಯವರಿಂದ ವಿಶ್ವವಿದ್ಯಾಲಯಕ್ಕೆ ಆಗಿರುವ ನಷ್ಟವನ್ನು ನಿಯಮಗಳನ್ವಯ ವಸೂಲಾತಿ ಮಾಡಲು ತೀರ್ಮಾನಿಸಲಾಗಿದೆ.

(ಕ್ರಮ:ಕುಸ)

**Item No.07 Permission for Bharat Sanchar Nigam Limited (BSNL) to construct a Ground Based Tower (GBT) at the College of Fisheries Campus, Mangaluru.**

**Resolution**

The Board of management after detailed discsion and deliberation, approved the proposal of leasing 3.0 cents of unutilized and unproductive land within the campus premises of College of Fisheries, Mangalore in accordance with KVAFSU Act 2004, Stututes 2009 and Government Order RD 161 LGP 2020 Dated 15-12-2020 duly following the extant proceders for the erection and commissioning of the BSNL tower.

(A:R)

**Item No.08 Pay protection to newly recruited teacher who joined KVAFSU after rendering service in ICAR Institutes/State Agricultural Universities/State Veterinary Universities**

**Resolution**

After detailed discussion and deliberation the Board of Manangement resolved to approve the pay protection to newly recuirted teacher Dr. Pradeep Doddamani, Assistant Professor, College of Fisheries, Mangalore who joined KVAFSU after rendering service in State Agricultural Universities.

| Sl | Name of faculty | Present pay scale | Past pay scale |
|---|---|---|---|
| 1 | Dr.Pradeep Doddamani<br>Assistant Professor<br>College of Fisheries, Mangalore | 57700-182400<br>Pay at KVAFSU<br>Rs. 57,700/- | 57700-182400<br>Pay at UAS, Raichur<br>Rs. 79,900 |

(A:R)

**ವಿಷಯ ಸೂಚಿ 09 ಕೊನೆಹಳ್ಳಿ, ತಿಪಟೂರನಲ್ಲಿ ಕುಕ್ಕುಟ ಸಂಶೋಧನೆ ಮತ್ತು ಮಾಹಿತಿ ಕೇಂದ್ರ (PRIC) ಸ್ಥಾಪನೆ ಕುರಿತು**

**ನಿರ್ಣಯ**

ದಿನಾಂಕ 19-11-2024 ರಂದು ಜರುಗಿದ ವಿಶ್ವವಿದ್ಯಾಲಯದ ಫಾರ್ಮ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ ಸಂಶೋಧನಾ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಫಾರ್ಮ ಅಭಿವೃದ್ಧಿ ಸಮತಿ, ಕಪಪಮೀವಿವಿ, ಬೀದರ ಇವರು ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ಜಾನವಾರು ಸಂಶೋಧನಾ ಹಾಗೂ ಮಾಹಿತಿ ಕೇಂದ್ರ, ಕೊನೆಹಳ್ಳಿ, ತಿಪಟೂರನಲ್ಲಿ ಹೊಸದಾಗಿ ಕುಕ್ಕಟ ಸಂಶೋಧನೆ ಹಾಗೂ ಮಾಹಿತಿ ಕೇಂದ್ರವನ್ನು ಸ್ಥಾಪನೆ ಸಂಬಂಧ ಭೂಮಿ ಮತ್ತು ಕಟ್ಟಡ, ಕುಕ್ಕಟ ಶೆಡ್‌ಗಳ ನಿರ್ಮಾಣಕ್ಕೆ ಬಜೆಟ್ ಅಂದಾಜು, ಉಪಕರಣಗಳ ಖರೀದಿಗೆ ಬಜೆಟ್ ಅಂದಾಜು, ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಒಳಗೊಂಡಂತೆ ಈ ಕೆಳಕಂಡಂತೆ ಪ್ರಸ್ತಾವನೆ ವಿದ್ಯಾವಿಷೇಯಕ ಪರಿಷತ್ತು ಸಭೆಯಲ್ಲಿ ಮಂಡಿಸಲು ಕೋರಲಾಗಿತ್ತು.

**1. ಭೂಮಿ ಮತ್ತು ಕಟ್ಟಡ:**

- **ಭೂಮಿ:** PRIC ಸ್ಥಾಪನೆಗಾಗಿ LRIC (ಅಮೃತಮಹಲ್) ನಲ್ಲಿರುವ KVAFSU ನ 10 ಎಕರೆ ಭೂಮಿಯನ್ನು ಹಂಚಿಕೆ ಮಾಡಬಹುದು.
- **ಕಟ್ಟಡ:** ಬೋಧಕ ವರ್ಗ ಮತ್ತು ಪೂರಕ ಸಿಬ್ಬಂದಿಗೆ ಕಚೇರಿಯಾಗಿ LRIC ನಲ್ಲಿರುವ ವಲಯ ಕೃಷಿ ಸಂಶೋಧನಾ ಕೇಂದ್ರದ (ZARS) ಅಸ್ತಿತ್ವದಲ್ಲಿರುವ ಕಟ್ಟಡವನ್ನು ಬಳಸಿಕೊಳ್ಳಬಹುದು

**2. ಕುಕ್ಕುಟ ಶೆಡ್‌ಗಳ ನಿರ್ಮಾಣ (ಬಜೆಟ್ ಅಂದಾಜು: 150.00 ಲಕ್ಷ ರೂ.)**

| ಕ್ರ. ಸಂ | ಶೆಡ್ ಪ್ರಕಾರ | ಗಾತ್ರ (ಅಡಿಗಳಲ್ಲಿ) | ಅಗತ್ಯವಿರುವ ಬಜೆಟ್ (ಲಕ್ಷಗಳಲ್ಲಿ) |
|---|---|---|---|
| 01 | ಬ್ರೂಡಿಂಗ್ ಶೆಡ್ (2000 ಮರಿಗಳಿಗಾಗಿ) | 20X60 | 20.00 |
